**Shikshan Sanshodhan : Journal of Arts, Humanities and Social Sciences**
**Monthly, Peer-Reviewed, Refereed, Indexed Journal**
**Volume - 9, Issue - 3, March - 2026**

**ISSN(o): 2581-6241**
**Impact Factor: 9.134**

DOIs:10.2018/SS/202603010 --:-- Research Paper / Article / Review

# ಭರತನಾಟ್ಯ ಕ್ಷೇತ್ರದಲ್ಲಿ ರೂಪಕಗಳು

**Dr. Jyothi Shankar**
Associate Professor, Department of Research and Studies in Kannada, Karnataka State Open University, Mysuru, India
Email – gurunatha2025@gmail.com

***Abstract:*** *ಭರತನಾಟ್ಯ ಕ್ಷೇತ್ರದಲ್ಲಿ ರೂಪಕಗಳು ನೃತ್ಯ, ಸಂಗೀತ, ಸಾಹಿತ್ಯ ಮತ್ತು ಅಭಿನಯಗಳ ಸಮನ್ವಯದಿಂದ ರೂಪುಗೊಳ್ಳುವ ಸಮಗ್ರಕಲಾರೂಪಗಳಾಗಿವೆ. ಪ್ರಾಚೀನ ಕಾಲದಿಂದಲೂ ನೃತ್ಯಕಲೆಯ ವಿಕಾಸವು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ರೂಪಕಗಳು ಮನರಂಜನೆಗೆ ಮಾತ್ರ ಸೀಮಿತವಾಗದೆ ಮೌಲ್ಯಬೋಧನೆ, ರಸಪ್ರತಿಪಾದನೆ ಮತ್ತು ಸಂಸ್ಕೃತಿ ಸಂರಕ್ಷಣೆಯ ಉದ್ದೇಶವನ್ನೂ ಹೊತ್ತಿವೆ. ಕಥಾಹಂದರ, ರಚನಾ ವಿನ್ಯಾಸ, ರಾಗ-ತಾಳ ಸಂಯೋಜನೆ ಹಾಗೂ ಅಭಿನಯದ ನೈಪುಣ್ಯ, ರೂಪಕಗಳ ಗುಣಮಟ್ಟವನ್ನು ನಿರ್ಧರಿಸುವ ಪ್ರಮುಖ ಅಂಶಗಳಾಗಿವೆ. ಹೀಗಾಗಿ ನೃತ್ಯರೂಪಕವು ದೃಶ್ಯಕಾವ್ಯಸ್ವರೂಪದಲ್ಲಿ ಸಮಾಜದ ಸಂವೇದನೆಗಳನ್ನು ಪ್ರತಿಬಿಂಬಿಸುವ ಶಕ್ತಿಶಾಲಿ ಕಲಾಮಾಧ್ಯಮವೆಂದು ಪರಿಗಣಿಸಬಹುದು.*

***Key Words:*** *ನೃತ್ಯಕಲೆ, ಸಂಸ್ಕೃತಿ, ನಾಟ್ಯಶಾಸ್ತ್ರ, ನೃತ್ಯರೂಪಕ, ಸಂಗೀತ*

## 1. ಪೀಠಿಕೆ:

ಮಾನವ ತನ್ನ ಭಾವನೆಯನ್ನು ಅಭಿವ್ಯಕ್ತಪಡಿಸುವ ಮಾಧ್ಯಮವೇ ಕಲೆ. ಮಾನವನ ಮನಸ್ಸು ಕಲೆಯಿಂದ ಸಂಸ್ಕರಿತವಾಗುತ್ತದೆ. ಒಂದು ಸಂಸ್ಕೃತಿಯು ಉತ್ತುಂಗದಲ್ಲಿ ಇರಬೇಕಾದರೆ, ಆ ಸಂಸ್ಕೃತಿಯ ಕಲಾ ಪರಂಪರೆಯು ಅತ್ಯುನ್ನತವಾಗಿರಬೇಕು. ಒಂದು ಸುಭದ್ರ, ಸುಸಂಸ್ಕೃತ ಸಮಾಜದಲ್ಲಿ ಕಲೆಯು ಚೆನ್ನಾಗಿ ಅಭಿವೃದ್ಧಿಯಾಗುತ್ತದೆ. ಒಂದು ಸಮಾಜದಲ್ಲಿ ಅಥವಾ ದೇಶದಲ್ಲಿ ಸುಭಿಕ್ಷತೆ, ಸುರಕ್ಷತೆಯಿದ್ದು ಸರ್ವತೋಭದ್ರವಾಗಿದ್ದರೆ ಅಲ್ಲಿ ಕಲೆಯು ವಿಕಾಸಗೊಳ್ಳುತ್ತದೆ. ಹೀಗಾಗಿ ಇತಿಹಾಸವನ್ನು ಅವಲೋಕಿಸಿದಾಗ ಒಂದು ಉನ್ನತ ಮಟ್ಟದ ನಾಗರೀಕತೆಯನ್ನು ವಿಶ್ಲೇಷಿಸಬೇಕಾದರೆ ಆ ನಾಗರೀಕತೆಯ ಕಲಾನೈಪುಣ್ಯವು ಆ ನಾಗರೀಕತೆಯ ಸಂಸ್ಕಾರದ ಮಟ್ಟವನ್ನು ಸೂಚಿಸುತ್ತದೆ. ಕಲೆಯು ಯೋಚನಾ ಲಹರಿಯ ಔನ್ನತ್ಯಕ್ಕೆ ಕಾರಣವಾಗುತ್ತದೆ. ಕಲೆಯು ಮಾನಸಿಕ ಸಮತೋಲನವನ್ನು ಹಾಗೂ ಬೌದ್ಧಿಕ ಬೆಳವಣಿಗೆಯನ್ನು ಪೋಷಿಸುತ್ತದೆ.

ಕುಣಿಯುವುದು ಮತ್ತು 'ಕುಣಿದಾಡುವುದು' ಎನ್ನುವುದು ಮಾನವನ ಮೂಲಭೂತ ಪ್ರವೃತ್ತಿಗಳಲ್ಲೊಂದು. ಅತೀವ ಸಂತೋಷವಾದಾಗ ಮಾನಸಿಕ ಪ್ರತಿಕ್ರಿಯೆಯು, 'ಕುಣಿದಾಡುವುದು' ಎಂಬ ಕ್ರಿಯೆಯಲ್ಲಿ ಅಭಿವ್ಯಕ್ತವಾಗುತ್ತದೆ. ಕಲಾಭಿವ್ಯಕ್ತಿಯೂ ಸಂತೋಷವೆಂಬ ಅನುಭವವೂ ಯಾವಾಗಲೂ ಪರಸ್ಪರವಾದುವು. ಸಂತೋಷಾಧಿಕ್ಯದ ಅಭಿವ್ಯಕ್ತರೂಪವಾದ 'ಕುಣಿದಾಡುವುದು' ಎನ್ನುವ ಈ ಭೌತಿಕ ಕ್ರಿಯೆಯಲ್ಲಿನ ಚಲನೆಗಳನ್ನು ಪ್ರತ್ಯೇಕೀಕರಿಸಿ, ಅವನ್ನೇ ಕಲಾಕರಿಸಿ, ಕ್ರೋಢೀಕರಿಸಿ, ಪ್ರಯೋಗಿಸಿ, ಕಲಾನುಭವಕ್ಕೆ ಆಸ್ಪದವಾಗಿ ಆವಿಷ್ಕಾರವಾದುದೇ ನೃತ್ಯಕಲೆ.

## 2. ಭಾರತೀಯ ನೃತ್ಯದ ಉಗಮ ಮತ್ತು ವಿಕಾಸ

ಸಿಂಧೂ ನಾಗರಿಕತೆಯಲ್ಲಿ ಕ್ರಿ. ಪೂ. ಸುಮಾರು ೩೨೫೦-೨೭೫೦ರಲ್ಲಿ ಸಹ ನೃತ್ಯ ಕಲೆ ಬೆಳೆದಿರುವುದಕ್ಕೆ ಅನೇಕ ಪುರಾವೆಗಳು ದೊರೆತಿವೆ. ಹರಪ್ಪಾ ಉತ್ಖನನದಲ್ಲಿ ನೃತ್ಯದ ಭಂಗಿಯಲ್ಲಿ ಪುರಾತನ ಭಗ್ನಸ್ಥಿತಿಯಲ್ಲಿ ಇರುವ ಮೂರ್ತಿ ದೊರೆತಿದ್ದು, ನರ್ತಕನು ತನ್ನ ಬಲಗಾಲನ್ನು ಭೂಮಿಯ ಮೇಲೆ ಇಟ್ಟು ಎಡಗಾಲನ್ನು ನರ್ತನ ಕ್ರಿಯೆಯಲ್ಲಿ ಮೇಲೆ ಎತ್ತಿದ್ದಾನೆ. ಈ ಭಂಗಿಯನ್ನು ನೃತ್ಯಕಲಾಕೋವಿದರು ನಟರಾಜನ (ಶಿವನ) ರೂಪ ಎಂದು ಭಾವಿಸಿದ್ದಾರೆ. ಮೊಹೆಂಜದಾರೋ ಉತ್ಖನನದಲ್ಲಿಯೂ ಸಹ ನೃತ್ಯದ ಭಂಗಿಯಲ್ಲಿ ಇರುವ ವನಿತೆಯ ಮೂರ್ತಿಯೊಂದು ದೊರೆತಿದ್ದು, ಮೂರ್ತಿಯ ಮುಡಿಯು ಶೃಂಗಾರಯುತವಾಗಿದೆ. ಎರಡು ಕೈತುಂಬಾ ಅಲಂಕಾರಯುಕ್ತವಾದ ಬಳೆಗಳಿರುವುದನ್ನು ಕೂಡ ಇಲ್ಲಿ ಗಮನಿಸಬೇಕು. ಇನ್ನು ಕೆಲವು ಚಿತ್ರಗಳಲ್ಲಿ ತಾಳ, ಕರತಾಳಗಳು ಇರುವುದು ಕಂಡುಬರುತ್ತದೆ. ಕಾರ್ಡಿಯಲ್

ಗೋಮ್ಸ್ ರವರು 'ಈ ಕಾಲದ ಸಂಗೀತದ ಮಟ್ಟ, ಪಾವಿತ್ರ್ಯತೆ ಹಾಗೂ ನೈತಿಕತೆ ಉನ್ನತ ಮಟ್ಟದ್ದಾಗಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ. ಅಂಧಕಾರ ಯುಗದಿಂದ ಸಿಂಧೂನದಿ ಸಂಸ್ಕೃತಿವರೆಗಿನ ಜನರ ಸಂಗೀತದ ವಿಕಾಸ ಎಂದರೆ ಮಾನವನ ಸಹಜ ವಿಕಾಸ' ಎಂಬ ಅಭಿಪ್ರಾಯವನ್ನು ಹೊಂದಿದ್ದರು ಎಂಬುದನ್ನು ಕಾಣಬಹುದು.

ವೈದಿಕ ಸಂಸ್ಕೃತಿಯ ಜನರು ನೃತ್ಯವನ್ನೂ ಕೂಡ ಸಂಗೀತದೊಂದಿಗೇ ಸೇರಿಸಿ ವ್ಯವಹರಿಸುತ್ತಿದ್ದರು. ಸಂಗೀತ, ವಾದ್ಯ, ನೃತ್ಯಗಳನ್ನು ಒಂದೇ ಸಾಲಿನಲ್ಲಿ ಸಂಬೋಧಿಸುವ ಪರಿಪಾಠವನ್ನು ನಾವು ಗಮನಿಸಬಹುದು. ವೇದಯುಗದ ಕಾಲದಲ್ಲಿ ನೃತ್ಯವು ಅಂದಿನ ಜನಾಂಗದ, ಜನಜೀವನದ ಅಂಗವಾಗಿತ್ತು. 'ಗೀತಾಯ ಸೂತಮ್ ನೃತ್ತಾಯ ಶೈಲೂಶಮ್ ಯಸ್ಯಾ ಗಾಯಂತಿ ನೃತ್ಯಂತಿ'. ಋಗ್ವೇದದಲ್ಲಿ 'ಸಮನ್' ಎಂಬ ನೃತ್ಯಪ್ರಕಾರದ ಉಲ್ಲೇಖವಿದೆ. ಯಜುರ್ವೇದದಲ್ಲಿ ನರ್ತಕರ, ಗಾಯಕರ, ವೀಣಾವಾದಕರ, ದುಂದುಭಿವಾದಕರ ಉಲ್ಲೇಖ ಇದೆ. ಸಾಮವೇದವು ಸಂಗೀತಕ್ಕೆ ಮೂಲ. ಋಗ್ವೇದದ ಋಕ್ಕುಗಳೇ ಸಾಮವೇದದಲ್ಲಿ ಬಹಳವಾಗಿವೆ. ಅಥರ್ವಣ ವೇದದಲ್ಲಿ ಪುಷ್ಪನೃತ್ಯ, ವಸಂತ ನೃತ್ಯ, ಸಲಿಲ ನೃತ್ಯ, ರಜ್ಜು ನೃತ್ಯ, ಅರುಣ ನೃತ್ಯ ಮುಂತಾದ ನೃತ್ಯಗಳ ಉಲ್ಲೇಖ ಇದೆ. ಕಾಲಾನಂತರದಲ್ಲಿ 'ಸಮನ್' ಎಂಬ ನೃತ್ಯ ಸಮಾರಂಭ 'ಸಮಜ್ಞಾ' ಎಂಬುದಾಗಿ ಪರಿವರ್ತನೆಯನ್ನು ಹೊಂದಿ ವೈಶಿಷ್ಟ್ಯ ಪೂರ್ಣ ನೃತ್ಯ ಕಾರ್ಯಕ್ರಮವಾಗಿ ಮಾರ್ಪಾಟಾಯಿತೆನ್ನುವ ಸಂಗತಿಯನ್ನು ಉಪನಿಷತ್ತುಗಳಿಂದ ಗ್ರಹಿಸಬಹುದು. ಇದರಲ್ಲಿ ಸಮೂಹ ನೃತ್ಯ ಮತ್ತು ಗಾಯನ ಇರುತ್ತಿತ್ತು.

ಹರಿವಂಶದಲ್ಲಿ ನೃತ್ಯ ಮತ್ತು ನೃತ್ಯ ಕಲಾಕಾರರ ವರ್ಣನೆಯಿದೆ. ಲೋಕನೃತ್ಯವು ಸಾಕಷ್ಟು ಪ್ರಚಾರದಲ್ಲಿ ಇದ್ದದ್ದು ಕಂಡುಬರುತ್ತದೆ. ಕಣ್ವ – ಮಾಧ್ಯಂದಿನ ಸಂಹಿತೆಗಳಲ್ಲಿಯೂ ನೃತ್ಯ, ನಾಟ್ಯಾಚಾರ್ಯ, ಗಾಯಕ ಶಬ್ದಗಳು ದೊರೆತಿವೆ. ಮತ್ಸ್ಯ, ಮಾರ್ಕಂಡೇಯ ಪುರಾಣಗಳಲ್ಲಿ ಸಂಗೀತ ನೃತ್ಯಗಳ ಪ್ರಕರಣಗಳು ವಿಪುಲವಾಗಿವೆ.

ರಾಮಾಯಣದ ಕಾಲದಲ್ಲಿ ನಾಟ್ಯದ ಮಾರ್ಗೀ ಮತ್ತು ದೇಶೀ ರೂಪಗಳ ಪ್ರಸ್ತಾಪವಿದೆ. ಧಾರ್ಮಿಕ ಹಾಗೂ ಸಾರ್ವಜನಿಕ ಸಮಾರಂಭಗಳಲ್ಲಿ ನೃತ್ಯ ಕಾರ್ಯಕ್ರಮಗಳ ವರ್ಣನೆ ದೊರೆತಿದೆ. ಆ ಕಾಲದ ನೃತ್ಯದಲ್ಲಿ ಅಂಗ, ಪ್ರತ್ಯಂಗಗಳ ಮೂಲಕ ಅಂತರಂಗ ಭಾವನೆಗಳ ಅಭಿವ್ಯಕ್ತಿ ಇದ್ದಿತು. ಲಾಸ್ಯ ಎಂಬ ಸುಕುಮಾರ ನೃತ್ಯದ ಪ್ರಕಾರವು ವಿಶೇಷವಾಗಿ ಪ್ರಚಾರದಲ್ಲಿ ಇರುವುದು ತಿಳಿಯುತ್ತದೆ.

ಮಹಾಭಾರತದ ಕಾಲದಲ್ಲಿ ನಾಟ್ಯವು ವೈದಿಕ ಹಾಗೂ ಲೌಕಿಕ ಎಂದು ಎರಡು ರೀತಿಯಾಗಿ ಬೆಳೆದು ಬಂದಿರುವುದು ಕಂಡುಬರುತ್ತದೆ. ಪ್ರಾಚೀನ ಕಾಲದ ಲಾಸ್ಯ ಎಂಬ ನೃತ್ಯದ ಜೊತೆಗೆ 'ರಾಸಲೀಲಾ' ನೃತ್ಯದ ಪ್ರಕಾರವು ಮಹಾಭಾರತ, ಭಾಗವತಾದಿಗಳಲ್ಲಿ ಕಂಡುಬರುತ್ತದೆ. 'ಸಮಜ್ಞಾ' ನೃತ್ಯ ಕಾರ್ಯಕ್ರಮಗಳು ನಡೆಯುತ್ತಿದ್ದದ್ದು ಮತ್ತು ನೃತ್ಯದಲ್ಲಿ ನಿಪುಣರಾದವರನ್ನು ರಾಜ್ಯ ಕಲಾಕಾರರೆಂದು ಗೌರವಿಸುತ್ತಿದ್ದುದು ಕಂಡುಬಂದಿದೆ. ಅರ್ಜುನನು ಸ್ವತಃ ನೃತ್ಯದಲ್ಲಿ ನಿಪುಣನಾಗಿದ್ದು ಅಜ್ಞಾತವಾಸದ ಸಂದರ್ಭದಲ್ಲಿ ಉತ್ತರೆಗೆ ನಾಟ್ಯವನ್ನು ಕಲಿಸಿದ ಸಂಗತಿಯನ್ನು ಇಲ್ಲಿ ಸ್ಮರಿಸಬಹುದು. ಕೃಷ್ಣನ ಲಾಸ್ಯದ ಬಗೆಗೆ ಭಾಗವತದಲ್ಲಿ ಅನೇಕ ವರ್ಣನೆಗಳಿವೆ. ಪಾಣಿನಿ ಮಹರ್ಷಿಗಳು ತಮ್ಮ ಕಾಲಕ್ಕೆ ಹಿಂದಿನ ಶಿಲಾಲೀ ಹಾಗೂ ಕೃಶಾಶ್ವ ಎಂಬುವವರ ನಟಸೂತ್ರಗಳನ್ನು ತಮ್ಮ ಅಷ್ಟಾಧ್ಯಾಯಿಯಲ್ಲಿ ಪ್ರಸ್ತಾಪಿಸಿದ್ದಾರೆ.

**|| ಪಾರಾಶರ್ಯಶಿಲಾಲಿಭ್ಯಾಂ ಭಿಕ್ಷುಃ ನಟಸೂತ್ರಯೋಃ ಕರ್ಮನ್ದ ಕೃಶಾಶ್ವಾದೀನಿ ||**

ಜೈನಯುಗದಲ್ಲಿ ರಾಜ ಉದಯನನು ತನ್ನ ಪತ್ನಿ ನಾಟ್ಯ ಮಾಡುತ್ತಿದ್ದಾಗ ಹಿಮ್ಮೇಳದಲ್ಲಿ ವೀಣೆ ನುಡಿಸುತ್ತಿದ್ದುದ್ದರ ವರ್ಣನೆಯಿದೆ. ನಗರ ಹಾಗೂ ಗ್ರಾಮುಗಳಲ್ಲಿಯೂ ಸಂಗೀತ, ನೃತ್ಯ ಸಮಾರಂಭಗಳು ನಡೆಯುತ್ತಿದ್ದ ಬಗ್ಗೆ ಉಲ್ಲೇಖಗಳು ದೊರೆತಿವೆ. ನಾಟ್ಯದ ಅನುಪಮಿತ ಸೌಂದರ್ಯವನ್ನು ಬೇಲೂರಿನ ಚೆನ್ನಕೇಶವ ದೇವಾಲಯದ ಶಿಲ್ಪಗಳಿಂದ ಆಸ್ವಾದಿಸಬಹುದು. ವಿವಿಧ ನಟನಾಭಂಗಿಗಳಲ್ಲಿರುವ ಶಿಲಾಬಾಲಿಕೆಯನ್ನು ಅಲ್ಲಿ ನೋಡಬಹುದು. ರಾಜ ವಿಷ್ಣುವರ್ಧನನ ಪತ್ನಿ ರಾಣಿ ಶಾಂತಲೆಯು ಸ್ವತಃ ಅತ್ಯುನ್ನತ ನಾಟ್ಯಕಲಾಕೋವಿದೆಯಾಗಿದ್ದಳು. ಹಲವಾರು ದೇವಸ್ಥಾನಗಳಲ್ಲಿ ದೇವರ ಮುಂದೆ ನರ್ತಿಸಲು ನಿರ್ಮಿಸಿರುವ ನವರಂಗಗಳನ್ನು, ನಾಟ್ಯಮಂಟಪಗಳನ್ನು ಇಂದಿಗೂ ಕಾಣಬಹುದು.

ಅಮರಸಿಂಹನು ತನ್ನ ನಾಮಲಿಂಗಾನುಶಾಸನದಲ್ಲಿ ನಾಟ್ಯದ ಪ್ರಕಾರಗಳನ್ನು ಹೇಳುತ್ತಾ

**|| ತಾಂಡವಂ ನಟನಂ ನಾಟ್ಯಂ ಲಾಸ್ಯಂ ನೃತ್ಯಂ ಚ ನರ್ತನೇ |**
**ತೌರ್ಯತ್ರಿಕಂ ನೃತ್ಯಗೀತವಾದ್ಯಂ ನಾಟ್ಯಮಿದಂ ತ್ರಯಮ್ ||**

ಎಂಬುದಾಗಿ ಪ್ರಕಾರಗಳನ್ನು ಹೆಸರಿಸುತ್ತಾನೆ.

### 3. ಭಾರತೀಯ ನೃತ್ಯ ರೂಪಕಗಳು

ಭರತನ ನಾಟ್ಯಶಾಸ್ತ್ರದಲ್ಲಿಯೇ ರೂಪಕದ ಸ್ಪಷ್ಟವಾದ ಉಲ್ಲೇಖ ದೊರೆಯುತ್ತದೆ. ಈಗಾಗಲೇ ನೋಡಿದಂತೆ ನೃತ್ಯದ ಕ್ರಮದಲ್ಲಿ ವೈವಿಧ್ಯಗಳು ಬೆಳೆದಂತೆಲ್ಲಾ, ಪ್ರಸ್ತುತಿಯಲ್ಲೂ ಅನೇಕ ಮಾರ್ಪಾಟುಗಳು ಕಂಡು ಬಂದವು. ಮಾರ್ಗನೃತ್ಯದ ಪ್ರದರ್ಶನದಲ್ಲಿಯೇ **ಸ್ಪಷ್ಟವಾದ ಕಥಾಹಂದರದ** ನಿರೀಕ್ಷೆ ಹೆಚ್ಚಾಗ ತೊಡಗಿದ್ದರಿಂದ, ರೂಪಕಗಳು ಗಮನಾರ್ಹವಾಗಿ ಪ್ರಯೋಗಕ್ಕೆ ಒಳಗಾದವು. ಭರತನ ನಾಟ್ಯಶಾಸ್ತ್ರದಲ್ಲಿಯೇ **ದಶರೂಪವಿಕಲ್ಪನದ** ವಿವರಗಳು ದೊರೆಯುತ್ತವೆ. ಅವು – **ನಾಟಕ, ಪ್ರಕರಣ, ಅಂಕ, ವ್ಯಾಯೋಗ, ಭಾಣ, ಸಮವಕಾರ, ವೀಥಿ, ಪ್ರಹಸನ, ಡಿಮ ಮತ್ತು ಈಹಾಮೃಗ.** ಒಂದು ನೃತ್ಯರೂಪಕ ಮೇಲಿನ ಎಲ್ಲಾ ವಿಧಗಳನ್ನೂ ಸಾಮಾನ್ಯವಾಗಿ ಹೊಂದಿರುತ್ತದೆ, ಇಲ್ಲವೇ ಕೆಲವು ಅಂಶಗಳನ್ನು ಕಥೆಗೆ ಅನುಗುಣವಾಗಿ ಹೊರತುಪಡಿಸಿರಬಹುದು.

ಇಂದು ನೃತ್ಯಕ್ಷೇತ್ರದಲ್ಲಿ ಕಾಣುತ್ತಿರುವ ರೂಪಕಗಳು ನೃತ್ಯ – ಸಂಗೀತ – ಸಾಹಿತ್ಯ – ಅಭಿನಯಗಳ ಸಮಾಗಮವಾಗಿದೆ. ಇದರ ಜೊತೆಗೆ ಬೆಳಕು ಮತ್ತು ರಂಗ ಸಜ್ಜಿಕೆಯೂ ಗಮನಾರ್ಹವಾಗಿಯೇ ಸೇರಿಕೊಂಡಿದೆ. ಹೀಗಾಗಿ ರೂಪಕಗಳು ಕೇವಲ ನೃತ್ಯ ಪ್ರದರ್ಶನವಲ್ಲದೆ, ಕಥಾವಸ್ತು, ಪಾತ್ರಚಿತ್ರಣ, ಭಾವಗಳ ಅಭಿವ್ಯಕ್ತಿ ಮತ್ತು ರಸಪ್ರತಿಪಾದನೆಯ ಸಮಗ್ರ ಸಂಯೋಜಿತ ಕಲಾಕೃತಿಗಳಾಗಿವೆ. ನೃತ್ಯರೂಪಕಗಳ ಪ್ರಸ್ತುತಿ ಸಾಮಾನ್ಯ ನೃತ್ಯ ಪ್ರದರ್ಶನಕ್ಕಿಂತ ಹೆಚ್ಚಿನ ಅಭ್ಯಾಸ ಮತ್ತು ಶ್ರಮವನ್ನು ಬೇಡುತ್ತದೆ, ಅದಕ್ಕಿರುವ ಮುಖ್ಯ ಕಾರಣವೇ ರೂಪಕದ ವಿನ್ಯಾಸ, ಅವುಗಳನ್ನೊಮ್ಮೆ ವಿವರವಾಗಿ ಪರಿಶೀಲಿಸಿದರೆ ಕೆಳಕಂಡ ಅಂಶಗಳು ಸ್ಫುಟವಾಗಿ ವ್ಯಕ್ತವಾಗುತ್ತವೆ.

ರೂಪಕದ ರಚನೆಯೇ ಸ್ಪಷ್ಟವಾದ ಕಥಾ ಹಂದರವನ್ನು ಪ್ರೇಕ್ಷಕನಿಗೆ ಉಣ ಬಡಿಸುವ ಉದ್ದೇಶವನ್ನು ಹೊಂದಿರುವುದಲ್ಲದೆ, ತನ್ಮೂಲಕ ಮೌಲ್ಯಗಳನ್ನು ಪ್ರೇಕ್ಷಕ ಸಮುದಾಯದೊಳಗೆ ಬಿತ್ತುವ ಮಹತ್ವದ ಆಶಯವನ್ನು ಹೊಂದಿರುವುದರಿಂದ, ಕಥೆಯ ಅಭಿವ್ಯಕ್ತಿಗಿರುವಷ್ಟೇ ಪ್ರಾಮುಖ್ಯ ಮೌಲ್ಯದ ಅಭಿನಯಕ್ಕೆ – ಪ್ರದರ್ಶನಕ್ಕೆ ನೀಡಬೇಕಾಗುತ್ತದೆ. ಇದು ಪ್ರತಿ ಬಾರಿಯೂ, ನರ್ತಕರ ನೃತ್ಯ ಪರಿಣತಿಯನ್ನು ಒರೆ ಹಚ್ಚುವ ಸಂಗತಿಯಾಗಿರುತ್ತದೆ. ರೂಪಕಗಳನ್ನು ಪ್ರದರ್ಶಿಸಬೇಕಾದರೆ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ.

• ವಸ್ತುವಿನ ಆಯ್ಕೆಯನ್ನು ನಾಟ್ಯಶಾಸ್ತ್ರಕ್ಕೆ ಅನುಗುಣವಾಗಿಯೇ. **ವಸ್ತು ಪ್ರಖ್ಯಾತದ** ಹಿನ್ನೆಲೆಯಲ್ಲೇ ಆಯ್ಕೆ ಮಾಡಿಕೊಳ್ಳಬೇಕು. ಇಲ್ಲಿ ಚತುರ್ವಿಧ ಪುರುಷಾರ್ಥಗಳೂ ಸ್ಥಾನ ಪಡೆದುಕೊಂಡಿರಲೇಬೇಕು. ಕೆಲವೊಮ್ಮೆ ಪ್ರಖ್ಯಾತವಲ್ಲದ ಆದರೆ ಸನಾತನ ಪರಂಪರೆಯಲ್ಲಿ ಅಡಗಿದ್ದ ವಿಷಯಗಳನ್ನೂ ವಸ್ತುವಾಗಿ ಆಯ್ದುಕೊಳ್ಳಬಹುದು.

• ರೂಪಕದ ವಿಷಯವನ್ನು ಅಂಕಗಳನ್ನಾಗಿ ವಿಭಾಗಿಸಿಕೊಳ್ಳುವುದು ಬಹು ಮುಖ್ಯವಾದ ಸಂಗತಿ, ವಿವಿಧ ರಸಗಳು ರೂಪಕದಲ್ಲಿ ಅಡಕವಾಗಿರುವುದರಿಂದ, ರಸಗಳ ಅದ್ಭುತ ಪ್ರದರ್ಶನ ಸಮಾನವಾಗಿ ವಿವಿಧ ಅಂಕಗಳಲ್ಲಿ ಮೂಡಿದರೆ, ಒಟ್ಟು ಪ್ರಸ್ತುತಿಯ ರಸಸ್ವಾದದ ಗುಣಮಟ್ಟ ಹೆಚ್ಚಾಗುತ್ತದೆ.

• ಪ್ರತಿಯೊಂದು ರೂಪಕವೂ **ಪ್ರವೇಶಕ** ಮತ್ತು **ವಿಷ್ಕಂಭಗಳನ್ನು** ಹೊಂದಿರಬೇಕು. ರೂಪಕಗಳಲ್ಲಿ ಎಲ್ಲವನ್ನೂ ಕೇವಲ ಅಭಿನಯದಲ್ಲಾಗಲಿ ಇಲ್ಲವೇ ನೃತ್ತದಲ್ಲಾಗಲೀ ವ್ಯಕ್ತಪಡಿಸಲಾಗುವುದಿಲ್ಲ. ಆದ್ದರಿಂದ ಅಗತ್ಯವಿರುವ ಕಡೆಯಲ್ಲಿ ಅಥವಾ ಅಂಕಗಳ ಮಧ್ಯದಲ್ಲಿ ಸಂಕ್ಷಿಪ್ತವಾಗಿ ನಡೆಯುತ್ತಿರುವುದನ್ನು, ಮುಂದೆ ನಡೆಯಬೇಕಾದ್ದನ್ನು ಮತ್ತು ತಿಳಿಯಲೇಬೇಕಾದ ಮೌಲ್ಯ ಮತ್ತು ಸೂಕ್ಷ್ಮವಾದ ಸಂಗತಿಗಳನ್ನು ಅಲ್ಲಲ್ಲಿ ಸಂಕ್ಷಿಪ್ತವಾಗಿ ವಿವರಿಸಲೇಬೇಕು. ಹಾಗೆಯೇ ಸಂಸ್ಕೃತದ ಬದಲಾಗಿ ಕನ್ನಡ ಅಥವಾ ಸ್ಥಳೀಯ ಭಾಷೆಗಳನ್ನು ಬಳಸಿ ಸಂಭಾಷಣೆಗಳನ್ನು ಜೋಡಿಸುವುದರಿಂದ ರೂಪಕದ ಗುಣಮಟ್ಟ ಮೇಲುಸ್ತರದಲ್ಲಿರುತ್ತದೆ, ನೋಡುಗರ ಮನಸಿನಲ್ಲಿ ರೂಪಕದ ವಸ್ತು ಅಚ್ಚಳಿದಂತೆ ನಿಲ್ಲುತ್ತದೆ.

• ರೂಪಕದ ಮೂಲಭೂತ ಉದ್ದೇಶ ಮನರಂಜನೆ ಮಾತ್ರವಲ್ಲ. ಆದ್ದರಿಂದ ಭರತನೇ ಹೇಳಿರುವಂತೆ ಸಮವಕಾರದ ಲಕ್ಷಣವನ್ನು ಗಮನದಲ್ಲಿರಿಸಿಕೊಂಡು ಉದಾತ್ತ ನಾಯಕ ಇಲ್ಲವೇ ನಾಯಕಿಯ ಪಾತ್ರವಿರುವಂತೆ ರೂಪಕ ಸೃಷ್ಟಿಯಾಗಬೇಕು. ಕೆಲವೊಮ್ಮೆ ಮೇಲ್ಮಟ್ಟದ ತಾತ್ವಿಕ ಸಂಗತಿಗಳೂ ರೂಪಕದ ವಸ್ತುವಾಗಬಹುದು. ಉದಾ: **ಅವಧೂತ ಗೀತೆ**

• ರೂಪಕದ ಭಾಷೆ, ವಸ್ತುವಿಗೆ ಅನುಗುಣವಾಗಿ ತನ್ನ ಗುಣಮಟ್ಟವನ್ನೂ ಕಾಯ್ದುಕೊಳ್ಳಲೇಬೇಕು. ಜಾಳುಜಾಳಾದ ಗ್ರಾಮ್ಯವಾದ ಪರಿಭಾಷೆ ರೂಪಕದ ಪ್ರದರ್ಶನಕ್ಕೆ ಹೊಂದಿಕೆಯಾಗುವುದಿಲ್ಲ. ರೂಪಕದ ಪಾತ್ರ – ವಸ್ತು – ಸಾಹಿತ್ಯ ಯಾವುದೂ ಕೀಳುಮಟ್ಟದ ಶೃಂಗಾರವನ್ನಾಗಲೀ ಹಾಸ್ಯವನ್ನಾಗಲೀ ಹೊಂದಿರಕೂಡದು. ಹಾಸ್ಯ ಸಹಜಭಾವವಾದರೂ

ಯಾವುದೇ ರೂಪಕಗಳು ಯಾರ ಮನಸ್ಸಿಗಾದರೂ ನೋವನ್ನು ತರುವಂತಿರಬಾರದು, ತತ್ವಗಳನ್ನು ಸಿದ್ಧಾಂತಗಳನ್ನು ಲೇವಡಿ ಮಾಡುವ ಪ್ರಯತ್ನಮಾಡಕೂಡದು. ಒಂದು ರೂಪಕ ಯಾರ – ಯಾವ ವಿಷಯದ ಘನತೆಗೂ ಧಕ್ಕೆಯನ್ನುಂಟುಮಾಡುವಂತಿರಕೂಡದು.

ರೂಪಕವೊಂದು ಮೇಲ್ಕಂಡ ಎಲ್ಲ ಅಂಶಗಳನ್ನೂ ಗಮನದಲ್ಲಿರಿಸಿಕೊಂಡು ಕಥೆಯೊಂದನ್ನು ಆಯ್ಕೆ ಮಾಡಿಕೊಂಡು, ಅದರ ಆಧಾರದ ಮೇಲೆ ಸಾಹಿತ್ಯವನ್ನು ರಚನೆಮಾಡಿಕೊಳ್ಳಬೇಕಾಗುತ್ತದೆ. ಸಾಕಷ್ಟು ಬಾರಿ ಸಿದ್ಧವಾಗಿರುವ ಸಾಹಿತ್ಯ ದೊರೆಯುವುದಿಲ್ಲ. ಇಡೀ ರೂಪಕ ನಿಲ್ಲುವುದೇ ರೂಪಕದ ಸಾಹಿತ್ಯವನ್ನು ಆಧರಿಸಿ. ಸಾಹಿತ್ಯ – ಸಂಗೀತ – ನೃತ್ಯ ಮೂರೂ ಕ್ಷೇತ್ರಗಳಲ್ಲಿ ಪರಿಣತಿ ಇದ್ದಾಗ ಮಾತ್ರವೇ, ಅದ್ಭುತವಾದ ರೂಪಕದ ರಚನೆಯನ್ನು ಮಾಡಲು ಸಾಧ್ಯ. ರೂಪಕ ಸಿದ್ಧವಾಗುತ್ತಿರುವಾಗಲೇ ಅದರ ಪ್ರಸ್ತುತಿ ರಚನಕಾರರ ಕಣ್ಮುಂದಿರುತ್ತದೆ. ಎರಡನೆಯ ಭಾಗದಲ್ಲಿ ಮುಖ್ಯ ಭೂಮಿಕೆಯನ್ನು ನಿರ್ವಹಿಸುವುದು ರೂಪಕದ ಸಂಗೀತ. ಎಲ್ಲಿ ಯಾವ ರಾಗದ ಬಳಕೆಯಾಗಬೇಕು – ಯಾವ ತಾಳ ಮತ್ತು ನಡೆಗಳಿರಬೇಕು ಎನ್ನುವದನ್ನು ಗಂಭೀರವಾಗಿ ಆಲೋಚಿಸಿ ನಿರ್ಧರಿಸಬೇಕು.

ರೂಪಕವೊಂದರ ನೃತ್ಯ ಸಂಯೋಜನೆ ಪ್ರಸ್ತುತಿಯ ಬಹು ಮುಖ್ಯ ಅಂಶ. ನೃತ್ತದ ಭಾಗಗಳಾವುವು, ನೃತ್ಯವನ್ನು ಎಷ್ಟು ಹೊತ್ತು ಉಳಿಸಿಕೊಳ್ಳಬೇಕು ಎನ್ನುವ ಸಂಗತಿಗಳು ಪೂರ್ವದಲ್ಲಿಯೇ ಚರ್ಚೆಗೆ ಒಳಗಾದರೆ, ಯಾವ ಸಂದರ್ಭಕ್ಕೆ ಜತಿಗಳ ಅಳವಡಿಕೆ ಮಾಡಬಹುದೆಂದು ತಿಳಿಯುತ್ತದೆ. ಇವೆಲ್ಲವನ್ನೂ ಸರಿದೂಗಿಸುವುದು ಅಭಿನಯ - ರೂಪಕದ ಅಭಿನಯ ಅತ್ಯಂತ ಕ್ಲಿಷ್ಟವಾದುದು ಅದರಲ್ಲೂ ಏಕವ್ಯಕ್ತಿ ನೃತ್ಯರೂಪಕ ನರ್ತಕರ ಕ್ಷಮತೆಯನ್ನೇ ಪ್ರಶ್ನಿಸಿಬಿಡುತ್ತದೆ, ಸುಮಾರು ೨ ಗಂಟೆಗಳಿಗೂ ಮೀರಿ ನೃತ್ಯಕ್ಕೆ ಜೀವತುಂಬುವುದು ಸಾಧಾರಣ ಸಂಗತಿಯಲ್ಲ, ಗಟ್ಟಿಯಾದ ಸ್ಥೈರ್ಯವೇ ಬೇಕು.

ಅನೇಕ ಕಲಾವಿದರು ಸೇರಿ ಪ್ರಸ್ತುತ ಪಡಿಸುವ ನೃತ್ಯ ರೂಪಕಗಳು ಬಹು ಜನಮನ್ನಣೆಯನ್ನು ಗಳಿಸಿವೆ. ಇಲ್ಲಿ ವಿವಿಧ ಬಗೆಯ ನೃತ್ತ ಬಂಧಗಳ ಅಳವಡಿಕೆ, ವೈವಿಧ್ಯಮಯ ಸಂಯೋಜನೆಗಳನ್ನು ಮಾಡುವ ವಿಪುಲ ಅವಕಾಶವಿರುತ್ತದೆ. ಪಾತ್ರಗಳ ದೃಷ್ಟಿಯಿಂದ ಗಮನಿಸಿದಾಗ, ವಿವಿಧ ಪಾತ್ರಗಳನ್ನೇ ವಿಶೇಷವಾಗಿ ರಂಗದ ಮೇಲೆ ತರಬಹುದಾದ ಎಲ್ಲ ಸಾಧ್ಯತೆಗಳಿಗೂ ಇರುತ್ತವೆ. ಏಕವ್ಯಕ್ತಿ ಪ್ರದರ್ಶನದಲ್ಲಿ ಒಬ್ಬರೇ ಕಲಾವಿದರು ಎಲ್ಲ ಪಾತ್ರಗಳಿಗೂ ನ್ಯಾಯ ದೊರಕಿಸಿಕೊಡಬೇಕಾದ ಬಹುದೊಡ್ಡ ಪರೀಕ್ಷೆ ರಂಗದ ಮೇಲೆ ಎದುರಾಗುತ್ತದೆ. ಅದರಲ್ಲೂ ಸ್ತ್ರೀ ಪಾತ್ರವನ್ನು ಪುರುಷ ನಿರ್ವಹಿಸುವಾಗ ಎದುರಾಗುವ ಸಂದಿಗ್ಧವೇ ಬೇರೆ. ಅದೇ ಮಾದರಿಯಲ್ಲಿ ಸ್ತ್ರೀ, ಪುರುಷ ಪಾತ್ರವನ್ನು ಅಭಿನಯಿಸುವಾಗ ಎದುರಾಗುವ ಪ್ರಶ್ನೆಗಳೇ ಬೇರೆಯಾಗಿರುತ್ತವೆ. ಇದರಿಂದ ರೂಪಕಗಳನ್ನು ಅಭಿನಯಿಸುವಾಗ ಕಲಾವಿದ, ಸೃಜನಶೀಲವಾಗಿ ಬಹು ಎತ್ತರಕ್ಕೆ ಬೆಳೆಯುತ್ತಾನೆ. ಒಂದಾದ ಮೇಲೊಂದಂತೆ ಪಾತ್ರಗಳಲ್ಲಿ ಪರಕಾಯ ಪ್ರವೇಶವಾಗುವುದನ್ನೂ ಕಲಿಯುವುದರಿಂದ, ಅಭಿನಯದ ಮಾಗುವಿಕೆಯೂ ಪ್ರದರ್ಶನಕ್ಕನುಗುಣವಾಗಿ ಪಕ್ವಗೊಳುತ್ತದೆ.

ಕರ್ನಾಟಕದ ಸಾಂಸ್ಕೃತಿಕ ಜಗತ್ತಿನಲ್ಲಿ ನೃತ್ಯ ರೂಪಕಗಳು ಮಹತ್ವದ ಸ್ಥಾನ ಪಡೆದುಕೊಂಡಿದೆ. ಕನ್ನಡ ಮತ್ತು ಸಂಸ್ಕೃತ ಸಾಹಿತ್ಯವನ್ನು ಆಧರಿಸಿ ಅನೇಕ ನೃತ್ಯ ರೂಪಕಗಳು ಮೂಡಿಬಂದಿವೆ. ವಿಶೇಷತಃ ಶಾಸನಗಳು, ಉಪನಿಷತ್, ಧರ್ಮಸಿದ್ಧಾಂತಗಳನ್ನು ಆಧರಿಸಿದ ರೂಪಕಗಳೂ ಪ್ರದರ್ಶಿತವಾಗಿ ಜನಮನ್ನಣೆಗಳಿಸಿಕೊಂಡಿರುವುದು ಸಂತೋಷ ಮತ್ತು ಸಮಾಧಾನದ ಸಂಗತಿಯಾಗಿದೆ. ರಾಮಾಯಣ, ಮಹಾಭಾರತ, ಭಾಗವತಗಳು ರೂಪಕಗಳ ಸಾಲಿನಲ್ಲಿ ಅಗ್ರಸ್ಥಾನ ಪಡೆದುಕೊಳ್ಳುತ್ತಿರುವುದು ಸಂಸ್ಕೃತಿಯ ಪುನರುತ್ಥಾನವೇನೋ ಎನ್ನುವ ಭಾವವನ್ನು ತಂದಿದೆ. ಐತಿಹಾಸಿಕ ವ್ಯಕ್ತಿಗಳ ಜೀವನಚರಿತ್ರೆ, ದೇಶಭಕ್ತಿ, ಪರಿಸರದ ಪ್ರಜ್ಞೆಯಂತಹ ಆಯಾಮಗಳನ್ನೂ ನೃತ್ಯ ರೂಪಕ ಒಳಗೊಳ್ಳುತ್ತಿರುವುದು ಶ್ಲಾಘನೀಯ ಸಂಗತಿಯಾಗಿದೆ.

ಹೊಸ ಕಾಲದ ಆವಿಷ್ಕಾರಗಳನ್ನೂ ನೃತ್ಯರೂಪಕಗಳಲ್ಲಿ ಬಳಸಲಾಗುತ್ತಿದೆ. ವಾದ್ಯದಲ್ಲಿ ರಿದಂ ಪ್ಯಾಡ್ ನ ಬಳಕೆಯಾಗುತ್ತಿದೆ. ಬೆಳಕು – ಧ್ವನಿ ತಂತ್ರಜ್ಞಾನ, ಆಧುನಿಕವಾದ ವರ್ಣರಂಜಿತ ವೇದಿಕೆಯ ವಿನ್ಯಾಸ, ಮಲ್ಟಿಮೀಡಿಯಾ ಉಪಕರಣಗಳ ಬಳಕೆ ರೂಪಕಗಳ ಸತ್ವವನ್ನು ಮತ್ತಷ್ಟು ಹೆಚ್ಚಿಸುತ್ತದೆ. ನವೀನ ಮತ್ತು ಕ್ಲಿಷ್ಟ ವಿಷಯಾಧಾರಿತ ರೂಪಕಗಳನ್ನು ಪ್ರದರ್ಶಿಸುವಾಗ ಆ ಕುರಿತ ಕಿರುಹೊತ್ತಿಗೆ ಮತ್ತು ಕಿರು ಪರಿಚಯಾತ್ಮಕ ನುಡಿಗಳು, ನೋಡುಗರನ್ನು ಶೈಕ್ಷಣಿಕ ಶಿಸ್ತಿಗೆ ಒಳಪಡಿಸಿ, ರೂಪಕವನ್ನು ಗಂಭೀರವಾಗಿ ಪರಿಗಣಿಸಿ ಅರಿವನ್ನು ಪಡೆದುಕೊಳ್ಳುವುದರ ಜೊತೆಯಲ್ಲಿ, ಉನ್ನತಮಟ್ಟದ ರಸಾಸ್ವಾದನೆಗೂ ದಾರಿಮಾಡಿಕೊಡುತ್ತಿದೆ.

ನೃತ್ಯ ರೂಪಕಗಳಲ್ಲಿ ಭಾಗವಹಿಸುವ ಯುವಕಲಾವಿದರು ಪರಂಪರೆ ಮತ್ತು ಆಧುನಿಕತೆಯ ಸಮನ್ವಯದಿಂದ ನೃತ್ಯ ರೂಪಕಗಳನ್ನು ಸೃಜಿಸುತ್ತಿದ್ದಾರೆ. ಇದರಿಂದ ಸಂಸ್ಕೃತಿಯ ಸಂರಕ್ಷಣೆ, ಧಾರ್ಮಿಕ ಮತ್ತು ನೈತಿಕ ಮೌಲ್ಯಗಳ ಪ್ರಸಾರ, ಕಲಾವಿದರ ಸೃಜನಾತ್ಮಕ ಅಭಿವ್ಯಕ್ತಿ, ಶಿಕ್ಷಣ ಮತ್ತು ಮನರಂಜನೆಯ ಸಮನ್ವಯ ಒಟ್ಟಾಗಿಯೇ ನೆರವೇರುತ್ತಿದೆ.

ಆದ್ದರಿಂದ ನೃತ್ಯ ರೂಪಕವೆಂದರೆ ಇಂದು ಕೇವಲ ಕಲೆಯಾಗಿಯಲ್ಲದೆ, ಸಮಾಜದ ಸಂವೇದನೆಗಳನ್ನು ಪ್ರತಿಬಿಂಬಿಸುವ ಮಾಧ್ಯಮವೆಂದೆನಿಸಿಕೊಳ್ಳುತ್ತಿದೆ.

## 4. ಸಮಾರೋಪ

ನೃತ್ಯ ರೂಪಕವು ನೃತ್ಯ, ಸಂಗೀತ ಮತ್ತು ಸಾಹಿತ್ಯಗಳ ಸಮ್ಮಿಳನದಿಂದ ಉಂಟಾಗುವ ಸಮಗ್ರಕಲಾರೂಪ. ಇದನ್ನು ದೃಶ್ಯಕಾವ್ಯವೆಂದೂ ಕರೆಯಬಹುದು. ಪ್ರಾಚೀನ ಪರಂಪರೆಯಿಂದ ಆರಂಭವಾಗಿ ಇಂದಿನ ಆಧುನಿಕ ವೇದಿಕೆಗಳವರೆಗೂ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡಿರುವ ಈ ಕಲಾರೀತಿ, ಭಾರತೀಯ ಸಂಸ್ಕೃತಿಯ ಅಮೂಲ್ಯ ಪರಂಪರೆಯಾಗಿದೆ. ರೂಪಕಗಳು ಬರಿಯ ನೃತ್ಯ ವಾಗದೇ ಸಾಹಿತ್ಯ - ಸಂಗೀತದ ಸಮನ್ವಯದಿಂದ ರೂಪುಗೊಳ್ಳುವುದರಿಂದ, ಪ್ರೇಕ್ಷಕರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತದೆ. ಭಾರತೀಯ ನಾಟ್ಯ ಪರಂಪರೆಯ ಮೂಲವಾದ ನಾಟ್ಯಶಾಸ್ತ್ರದ ಸಿದ್ಧಾಂತಗಳನ್ನು ಆಧರಿಸಿ ಬೆಳೆದು ಬಂದಿರುವ ನೃತ್ಯ ರೂಪಕವು ಭವಿಷ್ಯದಲ್ಲಿಯೂ ತನ್ನ ಸಾಂಸ್ಕೃತಿಕ ಮೌಲ್ಯವನ್ನು ಉಳಿಸಿಕೊಂಡು, ಹೊಸ ಪೀಳಿಗೆಯ ಕಲಾವಿದರಿಗೂ ಪ್ರೇರಣೆಯಾಗಿದೆ.

## ಪರಾಮರ್ಶನ ಗ್ರಂಥಗಳು

1. ಶ್ರೀಭರತಮುನಿವಿರಚಿತಮ್ ನಾಟ್ಯಶಾಸ್ತ್ರಮ್, ಪಂಡಿತ ಕೇದಾರನಾಥ, ಸತ್ಯಭಾಮಾಬಾಯಿ ಪಾಂಡುರಂಗ ಪ್ರಕಾಶನಮ್, ಬೊಂಬಾಯಿ, ೧೯೪೩
2. ಸಾಹಿತ್ಯಾಚಾರ್ಯ ಮಧುಸೂದನ ಶಾಸ್ತ್ರಿ, ಶ್ರೀಮದ್ಭರತಮುನಿ ಪ್ರಣೀತಂ ನಾಟ್ಯಶಾಸ್ತ್ರಮ್, ಅಭಿನವಗುಪ್ತಪ್ರಣೀತಾಭಿನವಭಾರತೋಸಹಿತಮ್, ಭಾಗ: ೧, ೨, ೩ ಕಾಶೀ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ, ೧೯೭೧
3. ಕರ್ನಾಟಕ ಸಂಗೀತ ಪಾರಿಭಾಷಿಕ ಶಬ್ದಕೋಶ ಸಂಪುಟ- ೧, ೨: ಡಾ. ವಿ. ಎಸ್. ಸಂಪತ್ಕುಮಾರಾಚಾರ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೮೩
4. ಭಾರತೀಯ ಸಂಗೀತದಲ್ಲಿ ಪರಿಭಾಷಾ ಪ್ರಯೋಗ: ಡಾ. ರಾ. ಸತ್ಯನಾರಾಯಣ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೮೯
5. ನೃತ್ಯ ಲೋಕ, ಕೆ. ಮುರಳಿಧರ ರಾವ್, ಅತ್ರಿ ಬುಕ್ ಸೆಂಟರ್ ಮಂಗಳೂರು, ೧೯೯೮
6. ನೃತ್ಯ ಕಲೆ, ಯು. ಎಸ್. ಕೃಷ್ಣರಾವ್ ಮತ್ತು ಚಂದ್ರಭಾಗಾದೇವಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು, ೧೯೯೮
7. ಭರತಮುನಿ ವಿರಚಿತ ನಾಟ್ಯಶಾಸ್ತ್ರ, ಆದ್ಯ ರಂಗಾಚಾರ್ಯ, ಅಕ್ಷರ ಪ್ರಕಾಶನ, ಸಾಗರ (ನಾಲ್ಕನೇ ಮುದ್ರಣ) ೨೦೨೩